RNU AIR DHARWAD

**FEBRUARY 26,2025**
**ALL INDIA RADIO- DHARWAD**
**PRADESH SAMACHARA (KANNADA) 12PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವವರು: ವಿವೇಕಾದಿತ್ಯ ಕನಿಯಾಲ**

<><><>

**ಬೆಂಗಳೂರಿನಲ್ಲಿ ನಾಳೆಯಿಂದ** ಮೂರು ದಿನಗಳ ಕಾಲ, 'ಗೆಫೆಕ್ಸ್ ಶೃಂಗ ಸಭೆ' ಆಯೋಜಿತವಾಗಿದೆ ಎಂದು, ಮಾಹಿತಿ ತಂತ್ರಜ್ಞಾನ ಖಾತೆ ಸಚಿವ, ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ಎಕ್ಸ್ ಮಾಧ್ಯಮದಲ್ಲಿ ಸಚಿವರು ಈ ವಿಷಯ ಪ್ರಕಟಿಸಿದ್ದು, ಮಾಧ್ಯಮ ಹಾಗೂ ಮನೋರಂಜನೆಯ ಕ್ಷೇತ್ರದಲ್ಲಿ, ಭಾರತ ಜಾಗತಿಕ ನಾಯಕತ್ವ ವಹಿಸುವುದರ ಹಿಂದಿನ, ಚಾಲಕ ಶಕ್ತಿಯಾಗಿ ಬೆಂಗಳೂರಿನ ಶೃಂಗ ಸಭೆ, ದಿಕ್ಸೂಚಿಯಾಗಲಿದೆ, 20 ಸಾವಿರಕ್ಕೂ ಹೆಚ್ಚು ತಂತ್ರಜ್ಞರು ಭಾಗವಹಿಸುವ ನಿರೀಕ್ಷೆ ಇದೆ ಎಂದರು.

<><><>

**ಈ ಬಾರಿ ಎಸ್ಎಸ್ಎಲ್**ಸಿ ಪರೀಕ್ಷೆಯಲ್ಲಿ ಧಾರವಾಡ ಜಿಲ್ಲೆಯು ರಾಜ್ಯಕ್ಕೆ ಮೊದಲ ರ್‍ಯಾಂಕ್ ಗಳಿಸುವ ಗುರಿ ಹೊಂದಿದೆ ಎಂದು ಜಿಲ್ಲಾಧಿಕಾರಿ ದಿವ್ಯಾಪ್ರಭು ಜಿ.ಆರ್.ಜೆ ಹೇಳಿದ್ದಾರೆ. ಹುಬ್ಬಳ್ಳಿ ಸರ್ಕ್ಯೂಟ್ ಹೌಸ್ ನಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಎಸ್ಎಸ್ಎಲ್ಸಿ ಹಾಗೂ ಪಿಯುಸಿ ಪರೀಕ್ಷೆಗಳಿಗೆ ಜಿಲ್ಲಾಡಳಿತದಿಂದ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯಲ್ಲಿ, ಒಟ್ಟು 30 ಸಾವಿರದ 749 ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಹಾಜರಾಗಲಿದ್ದಾರೆ ಎಂದರು.

<><><>

**ಬೈಟ್: ದಿವ್ಯಾ ಪ್ರಭು 31 ಸೆಕೆಂದುಗಳು**

<><><>

**ರಾಜ್ಯಾದ್ಯಂತ 10ನೇ ತರಗತಿ ಪೂರ್ವ ಸಿದ್ಧತಾ** ಪರೀಕ್ಷೆಗಳು ಆರಂಭಗೊಂಡಿದ್ದು. ಧಾರವಾಡ ಜಿಲ್ಲಾಧಿಕಾರಿ ಅವರು, ನಗರದ ವಿವಿಧ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ, ಪರಿಶೀಲಿಸಿದರು

<><><>

**ಆಲೂರು ವೆಂಕಟರಾಯರು,** ತನು, ಮನ ಹಾಗೂ ಧನದಿಂದ, ಕನ್ನಡ ನಾಡು–ನುಡಿಯನ್ನು ಕಟ್ಟಿದವರು ಎಂದು, ಹೊಸ ದಿಲ್ಲಿಯ, ಪ್ರೆಸ್ ಇನ್ಫಾರ್ಮೇಶನ್ ಬ್ಯುರೋದ, ನಿವೃತ್ತ, ಪ್ರಾಚಾರ್ಯ ಮಹಾ ನಿರ್ದೇಶಕ, ಮನೀಶ ದೇಸಾಯಿ, ಅಭಿಪ್ರಾಯಪಟ್ಟರು. ಧಾರವಾಡದ, ಆಲೂರು ವೆಂಕಟರಾವ ಸಾಂಸ್ಕೃತಿಕ ಭವನದಲ್ಲಿ ಜರುಗಿದ, ಕರ್ನಾಟಕ ಕುಲ ಪುರೋಹಿತರ, 61ನೇ ಪುಣ್ಯ ಸ್ಮರಣೆ ಕಾರ್ಯಕ್ರಮದಲ್ಲಿ, ಅವರು ಅಥಿತಿಯಾಗಿ ಪಾಲ್ಗೊಂಡು, ಮಾತನಾಡಿದರು. ನಿವೃತ್ತ ಪ್ರಾಧ್ಯಾಪಕ ಜಿನದತ್ತ ಹಡಗಲಿ ಮಾತನಾಡಿ, ವರಕವಿ ದ.ರಾ. ಬೇಂದ್ರೆ ಅವರು, ಆಲೂರು ವೆಂಕಟರಾಯರನ್ನು, ಕರ್ನಾಟಕದ ಪ್ರಾಣೋಪಾಸಕ, ಎಂದು ಕರೆದಿದ್ದಾರೆ ಎಂದರು. ಟ್ರಸ್ಟ್ ಅಧ್ಯಕ್ಷ ಪ್ರಮೋದ ಗಾಯಿ, ಅಧ್ಯಕ್ಷತೆ ವಹಿಸಿದ್ದರು.

<><><>

**ಇಂದು ನಾಡಿನೆಲ್ಲೆಡೆ ಮಹಾಶಿವರಾತ್ರಿ** ಹಬ್ಬವನ್ನು ಸಂಭ್ರಮ ಸಡಗರದೊಂದಿಗೆ ಆಚರಿಸಲಾಗುತ್ತಿದೆ. ಶಿವರಾತ್ರಿ ಅಂಗವಾಗಿ ಇಂದು ಬೆಳಗ್ಗೆ ಚಿತ್ರದುರ್ಗದ ನೀಲಕಂಠೇಶ್ವರ ದೇವಸ್ಥಾನ, ಪಾತಾಳೇಶ್ವರ, ಚಂದ್ರವಳ್ಳಿಯ ಪಂಚಲಿಂಗಗಳಲ್ಲಿ ದೇವರಿಗೆ ರುದ್ರಾಭಿಷೇಕ ಹಾಗೂ ವಿಶೇಷ ಪೂಜೆ ಸಲ್ಲಿಸಲಾಯಿತು. ವಿಜಯಪುರದ ಶಿವಗಿರಿಯಲ್ಲಿ, ಬೃಹತ್ ಶಿವನ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ನೀಲಕಂಠೇಶ್ವರ, ಸುಂದರೇಶ್ವರ, ಕಪಿಲೇಶ್ವರ ದೇಗುಲಗಳಲ್ಲಿ ಭಕ್ತಾದಿಗಳು ಬಿಲ್ವಪತ್ರೆ, ಹೂ, ಹಣ್ಣುಗಳನ್ನು ದೇವರಿಗೆ ಸಮರ್ಪಿಸಿದರು.

<><><>

**ಈ ಬಾರಿ ಹಂಪಿ ಉತ್ಸವವನ್ನು ಹೆಚ್ಚಿನ** ವೈಭವದೊಂದಿಗೆ, ಜನೋತ್ಸವವಾಗಿ ಆಚರಿಸೋಣ ಎಂದು ಜಿಲ್ಲಾ ಉಸ್ತುವಾರಿ ಸಚಿವರಾದ ಬಿ ಝಡ್ ಜಮೀರ್ ಅಹ್ಮದ್ ಖಾನ್ ಹೇಳಿದರು. ವಿಜಯನಗರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಆಯೋಜಿಸಲಾಗಿದ್ದ ಜಿಲ್ಲಾಮಟ್ಟದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಹಂಪಿ ಉತ್ಸವವು ನಾಡಹಬ್ಬವಿದ್ದಂತೆ, ಜಿಲ್ಲಾ ಮಟ್ಟದ ಎಲ್ಲ ಅಧಿಕಾರಿಗಳು ಸಹಕರಿಸುವಂತೆ ಮನವಿ ಮಾಡಿದರು.

<><><>

**ಹಿರಿಯ ರಂಗ ಕಲಾವಿದೆ** ವಿಮಲಾ ರಂಗಾಚಾರ್ ಬೆಂಗಳೂರಿನಲ್ಲಿ ನಿಧನರಾದರು. ಅವರಿಗೆ 97 ವರ್ಷ ವಯಸ್ಸಾಗಿತ್ತು. ಮೈಸೂರು ರಾಜ್ಯ ಸಂಗೀತ ಅಕಾದೆಮಿ ಹಾಗೂ ಕ್ರಾಫ್ಟ್ ಕೌನ್ಸಿಲ್ ಆಫ್ ಇಂಡಿಯಾದ ಕಾರ್ಯಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿದ್ದ ಅವರು ಬೆಂಗಳೂರಿನ ಎಂಇಎಸ್ ಸಂಸ್ಥೆಯ ಸ್ಥಾಪಕ ಸದಸ್ಯರಾಗಿ, ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ನಾಳೆ ಅಂತ್ಯ ಸಂಸ್ಕಾರ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

<><><>

**ದಕ್ಷಿಣಕನ್ನಡ ಜಿಲ್ಲೆಯ** ಮರಳು ಅಭಾವ ನೀಗಿಸಲು, ಜಿಲ್ಲಾಧಿಕಾರಿ ನೇತೃತ್ವದಲ್ಲಿ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳೊಂದಿಗೆ, ಸಮನ್ವಯ ಸಭೆ ನಡೆಸುವಂತೆ, ವಿಧಾನಸಭಾಧ್ಯಕ್ಷ ಯು.ಟಿ. ಖಾದರ್, ಜಿಲ್ಲಾಡಳಿತಕ್ಕೆ ಸೂಚಿಸಿದ್ದಾರೆ. ಮಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, 'ಸ್ಯಾಂಡ್ ಬಜಾರ್ ಆಪ್' ಮೂಲಕ, ಮತ್ತೆ ಶ್ರೀ ಸಾಮಾನ್ಯರಿಗೆ, ಕಡಿಮೆ ದರದಲ್ಲಿ ಮರಳು ದೊರೆಯುವಂತೆ, ಸರಬರಾಜು ವ್ಯವಸ್ಥೆ ಮಾಡಲು, ಜಿಲ್ಲಾಡಳಿತಕ್ಕೆ ಸೂಚಿಸಿದ್ದಾಗಿ, ತಿಳಿಸಿದರು.

<><><>

**ವಿಜಯಪುರ ಜಿಲ್ಲೆಯಲ್ಲಿ ಉತ್ತಮವಾದ** ಮಾಲ್ದಂಡಿ ಜೋಳ ಬೆಳೆಯುತ್ತಿದ್ದು ಬೆಂಬಲ ಬೆಲೆ ಯೋಜನೆಯಡಿ ಬಿಳಿ ಜೋಳ ಖರೀದಿಸುವ ಕುರಿತು ಜಿಲ್ಲೆಯ ರೈತರಲ್ಲಿ ಸೂಕ್ತ ತಿಳುವಳಿಕೆ ಹಾಗೂ ಜಾಗೃತಿ ಮೂಡಿಸುವಂತೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾಕ್ಟರ ಎಂ.ಬಿ.ಪಾಟೀಲ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ..**